ಸತ್ರ ಪ್ರಕರಣ ಸಂಖ್ಯೆ: 38/2023

| | |
|---|---|
| ಫ್ರಾಸಾ | 22 |
| ಚಾಸಾ | 41 |

ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ:57)
ನಮೂನೆ ಸಂಖ್ಯೆ4
(ಸಿವಿಲ್)

**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ**

**(ಕಾರ್ಯಸ್ಥಾನ ಚಿಂತಾಮಣಿ)**

**ಎಸ್.ಸಿ ಪ್ರಕರಣ ಸಂಖ್ಯೆ:38/2023**

**ದಿನಾಂಕ: 26.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ರಾಧಮ್ಮ |
| ಗಂಡನ ಹೆಸರು | : | ಗೋಪಾಲಪ್ಪ |
| ವಯಸ್ಸು | : | 44 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ತಿಪ್ಪೇನಹಳ್ಳಿ ಗ್ರಾಮ |

**ಮುಖ್ಯ ವಿಚಾರಣೆ: ಸಾರ್ವಜನಿಕ ಅಭಿಯೋಜಕರಿಂದ:-**

1. ವಿಸಿ ಮುಖಾಂತರ ವಿಚಾರಣೆಗೆ ಹಾಜರಾಗಿರುವ ಆರೋಪಿಯನ್ನು ನಾನು ಈ ಹಿಂದೆ ನೋಡಿರುತ್ತೇನೆ. ಮೃತ ನೇತ್ರಮ್ಮ ನನ್ನ ತಂಗಿ. ಮೃತ ವರ್ಷಿತಾ ಮತ್ತು ಸ್ನೇಹ ನನ್ನ ತಂಗಿಯ ಮಕ್ಕಳು. ಆರೋಪಿ ನೇತ್ರಮ್ಮಳ ಗಂಡ. ನನ್ನ ತಂಗಿ ಮತ್ತು ಅವರ ಮಕ್ಕಳು ಈಗ ಜೀವಂತ ಇರುವುದಿಲ್ಲ. ನಾನು ನೋಡುವಾಗ ನನ್ನ ತಂಗಿ ಮತ್ತು ನನ್ನ ಗಂಡ ಚೆನ್ನಾಗಿದ್ದರು. ಆ ನಂತರ ಏನಾಯಿತು ಎಂದು ನನಗೆ ಗೊತ್ತಿಲ್ಲ. ಅವರುಗಳು

| | |
|---|---|
| ಫ್ರಾಸಾ | 22 |
| ಚಾಸಾ | 41 |

ಎಲ್ಲಿ ಸತ್ತು ಹೋಗಿದ್ದರು ಎಂದು ನನಗೆ ಗೊತ್ತಿಲ್ಲ. ಆದರೆ ಅವರು ಸತ್ತು ಹೋಗಿದ್ದಾರೆ ಎಂದು ವರ್ತಮಾನ ಬಂದಿತ್ತು. ನನ್ನ ತಂದೆ ಅಶ್ವತಪ್ಪ ಅವರುಗಳು ತೀರಿಕೊಂಡಿದ್ದಾರೆ ಎಂದು ತಿಳಿಸಿದ್ದರು. ನಾನು ಅವರುಗಳ ಶವಗಳನ್ನು ನೋಡಿರುವುದಿಲ್ಲ. ನಾನು ಪೋಲಿಸರಿಗೆ ಹೇಳಿಕೆಯನ್ನು ನೀಡಿರುವುದಿಲ್ಲ. ನಾನು ಶಿಡ್ಲಘಟ್ಟ ಆಸ್ಪತ್ರೆಗೆ ಹೋಗಿದ್ದೆ. ಆ ಸಮಯ ನನ್ನ ಸಹಿ ಪಡೆದಿರುತ್ತಾರೆ.

**ಈ ಹಂತದಲ್ಲಿ ಸಮಯ 04-15 ಗಂಟೆ ಆದ್ದರಿಂದ ಮುಂದುವರೆದು ಮುಖ್ಯ ವಿಚಾರಣೆಯನ್ನು ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ದಿನಾಂಕ:26.03.2026 ದಿರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓದಿ ಹೇ ಕೇ ಸರಿ ಇದೆ**

**ಸಹಿ/-**

**(ಕಾಂತರಾಜು.ಎಸ್.ವಿ.)**
**2 ನೇ ಹೆಚ್ಚುವರಿ ಜಿಲ್ಲಾ ಮತ್ತು (ವಿಶೇಷ) ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ (ಕಾರ್ಯಸ್ಥಾನ ಚಿಂತಾಮಣಿ)**

| | |
|---|---|
| ಫ್ರಾಸಾ | 22 |
| ಚಾಸಾ | 41 |

**ದಿನಾಂಕಃ 01-08-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ-**

ನಾನು ಪೋಲಿಸರ ಮುಂದೆ ಹಾಗೂ ತಹಸೀಲ್ದಾರರ ಮುಂದೆ ಯಾವುದೇ ಹೇಳಿಕೆಗಳನ್ನು ನೀಡಿರುವುದಿಲ್ಲ. ನಾನು ಆಸ್ಪತ್ರೆಯಲ್ಲಿ ಮೃತರುಗಳ ಶವಗಳನ್ನು ಹಾಗೂ ಅವರಿಗೆ ಆಗಿದ್ದ ಗಾಯಗಳನ್ನು ನೋಡಿರುವುದಿಲ್ಲ. ಅವರ ಸಾವಿಗೆ ಯಾರು, ಏನು ಕಾರಣ ಎಂದು ನನಗೆ ಗೊತ್ತಿಲ್ಲ. ನಾನು ಶಿಡ್ಲಘಟ್ಟದ ಸರ್ಕಾರಿ ಆಸ್ಪತ್ರೆಯ ಶವಗಾರಕ್ಕೆ ಹೋಗಿರುವುದಿಲ್ಲ.

**(ಈ ಹಂತದಲ್ಲಿ ವಿಶೇಷ ಸಾರ್ವಜನಿಕ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು. ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದಃ-**

ದಿ.22-02-2023 ರಂದು ಶಿಡ್ಲಘಟ್ಟ ಸರ್ಕಾರಿ ಆಸ್ಪತ್ರೆಯಲ್ಲಿ ಇರಿಸಿದ್ದ ನನ್ನ ತಂಗಿ ನೇತ್ರಮ್ಮ ಮತ್ತು ಅವರ ಮಕ್ಕಳಾದ ವರ್ಷಿತಾ ಮತ್ತು ಸ್ನೇಹ ರವರ ಶವಗಳನ್ನು ಪೋಲಿಸರು ನನಗೆ ತೋರಿಸಿದ್ದರು ಆಗ ನಾನು ಅವರ ಮೃತ ದೇಹಗಳನ್ನು ನೋಡಿ ಗುರುತಿಸಿ , ಹೇಳಿಕೆಗಳನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಗಳಲ್ಲಿ ನೇತ್ರಮ್ಮ ರವರಿಗೆ ಸುಮಾರು 15 ವರ್ಷ ಗಳ ಹಿಂದೆ ಆರೋಪಿಯನ್ನು ಕೊಟ್ಟು ಮದುವೆ ಮಾಡಿದ್ದು, ಅವರಿಗೆ 11 ವರ್ಷದ ವರ್ಷಿತಾ ಮತ್ತು 9 ವರ್ಷದ ಸ್ನೇಹ

| | |
|---|---|
| ಪ್ರಾಸಾ | 22 |
| ಚಾಸಾ | 41 |

ಎಂಬ ಇಬ್ಬರೂ ಹೆಣ್ಣು ಮಕ್ಕಳು ಇರುತ್ತಾರೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಮೂರು ವರ್ಷಗಳ ಹಿಂದೆ ಆರೋಪಿ ನನ್ನ ತಂಗಿಯಾದ ನೇತ್ರಮ್ಮರವರಿಗೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಕಿರುಕುಳ ನೀಡುತ್ತಿದ್ದು ಆ ಬಗ್ಗೆ ನನ್ನ ತಂಗಿ ಆರೋಪಿಯ ವಿರುದ್ಧ ಶಿಡ್ಲಘಟ್ಟ ಗ್ರಾಮಾಂತರ ಪೋಲಿಸ್ ಠಾಣೆಯಲ್ಲಿ ದೂರು ನೀಡಿದ್ದು ಸದರಿ ಕೇಸು ನ್ಯಾಯಾಲಯದಲ್ಲಿ ವಿಚಾರಣೆ ಇರುತ್ತದೆ ಎಂದರೆ ಸರಿಯಲ್ಲ. ಇತ್ತೀಚೆಗೆ ನನ್ನ ತಂಗಿ ನೇತ್ರಮ್ಮ ಮತ್ತು ಆಕೆಯ ಮಗಳಾದ ವರ್ಷಿತಾರವರು ಸೇರಿ ಅವರ ಆಸ್ತಿ ಭಾಗಕ್ಕಾಗಿ ಶಿಡ್ಲಘಟ್ಟ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂಗಿಗೆ ಆರೋಪಿ ಹೊಡೆದು ಬಡಿದು ಗಲಾಟೆ ಮಾಡುತ್ತಿದ್ದ ವಿಚಾರವಾಗಿ ನನ್ನ ತಂಗಿ ಮತ್ತು ಆಕೆಯ ಮಕ್ಕಳಾದ ವರ್ಷಿತಾ ಮತ್ತು ಸ್ನೇಹಾರವರಿಗೆ ಯಾವುದೇ ರೀತಿಯ ತೊಂದರೆ ಕೊಡದಂತೆ ಹಲವಾರು ಬಾರಿ ನ್ಯಾಯ ಪಂಚಾಯತಿ ಮಾಡಿ ಬುದ್ಧಿ ಹೇಳಿದ್ದೇವು ಎಂದರೆ ಸರಿಯಲ್ಲ. ಆದರೂ ಸಹ ಊಟ , ತಿಂಡಿ ಕೊಡದೆ ಅವರಿಗೆ ಯಾವುದೇ ಸೌಕರ್ಯ ನೀಡದೆ ಇದ್ದ ಕಾರಣ ನನ್ನ ತಂಗಿ ಆಕೆಯ ಮಕ್ಕಳೊಂದಿಗೆ ಪ್ರತ್ಯೇಕವಾಗಿ ವಾಸವಾಗಿದ್ದರು ಎಂದರೆ ಸರಿಯಲ್ಲ.

| | |
|---|---|
| ಪ್ರಾಸಾ | 22 |
| ಚಾಸಾ | 41 |

ದಿ.22.02.2023 ರಂದು ಬೆಳಿಗ್ಗೆ 08-10 ಗಂಟೆಯಲ್ಲ್ ನನ್ನ ತಮ್ಮನಾದ ಚಂದ್ರಶೇಖರ್ ಫೋನ್ ಮಾಡಿ ನೇತ್ರಮ್ಮ ಮತ್ತು ಆಕೆಯ ಮಕ್ಕಳನ್ನು ಆರೋಪಿ ಅವರ ಮನೆಯವರು ಕೊಲೆ ಮಾಡಿ ಬೆಂಕಿ ಹಚ್ಚಿರುವುದಾಗಿ ಹೇಳಿದ್ದರೂ ಎಂದರೆ ಸರಿಯಲ್ಲ. ಆಗ ನಾವು ತಕ್ಷಣ ಯಣ್ಣೂರು ಗ್ರಾಮಕ್ಕೆ ಬಂದು ನೋಡಲಾಗಿ ವಿಚಾರಿಸಲಾಗಿ ನಿಜವಾಗಿತ್ತು ಎಂದರೆ ಸರಿಯಲ್ಲ. ವಿಚಾರ ಮಾಡಿ ತಿಳಿದುಕೊಳ್ಳಲಾಗಿ , ದಿ.22-02-2023 ರಂದು ಬೆಳಗಿನ ಜಾವದ ಸಮಯದಲ್ಲಿ ಆರೋಪಿ ಆತನ ಅಣ್ಣ ಸುಬ್ರಮಣಿ , ತಮ್ಮ ನಾಗೇಶ, ಆತನ ತಂದೆ ಮಾರಪ್ಪರವರುಗಳು ಸೇರಿಕೊಂಡು ನನ್ನ ತಂಗಿ ನೇತ್ರಮ್ಮರವರು ವಾಸವಿದ್ದ ಮನೆಗೆ ಹೋಗಿ ಯಾವುದೋ ಮಾರಕಾಯುಧಗಳಿಂದ ಕೊಲೆ ಮಾಡುವ ಉದ್ದೇಶದಿಂದ ನೇತ್ರಮ್ಮ ರವರಿಗೆ ತಲೆಯ ಮಧ್ಯಭಾಗಕ್ಕೆ , ತಲೆಯ ಎಡಭಾಗಕ್ಕೆ, ಎಡಭಾಗದ ಕಿವಿಗೆ , ತಲೆಯ ಹಿಂಭಾಗಕಕ್ಷ , ಬಲ ಕೈ ಗೆ , ಎಡ ಕೈಗೆ ಹೊಡೆದು ರಕ್ತಗಾಯವನ್ನುಂಟು ಮಾಡಿ ನಂತರ ನನ್ನ ತಂಗಿಯ ದೊಡ್ಡ ಮಗಳಾದ ವರ್ಷಿತಾ ರವರಿಗೆ ಕತ್ತಿನ ಬಳಿ , ಕತ್ತಿನ ಹಿಂಭಾಗ ಹೊಡೆದು ರಕ್ತಗಾಯವನ್ನುಂಟು ಮಾಡಿ ನಂತರ ಆಕೆ ಚಿಕ್ಕ ಮಗಳಾದ ಸ್ನೇಹಾ ರವರಿಗೆ ತಲೆಯ ಹಿಂಭಾಗ , ಬಲ ಭುಜದ ಹಿಂಭಾಗ ಹೊಡೆದು ರಕ್ತಗಾಯವನ್ನುಂಟು ಮಾಡಿ ಮೂರು ಜನರು ಕೊಲೆ ಮಾಡಿ ನೇತ್ರಮ್ಮ , ವರ್ಷಿತಾ

| | |
|---|---|
| ಪ್ರಾಸಾ | 22 |
| ಚಾಸಾ | 41 |

ಮತ್ತು ಸ್ನೇಹ ರವರುಗಳ ಮೇಲೆ ಯಾವುದೋ ಪೆಟ್ರೋಲ್ ಅಥವಾ ಇಂಧನವನ್ನು ಸುರಿದು ಬೆಂಕಿ ಹಚ್ಚಿ ಅವರ ಮೈ ಮೇಲೆ ಸುಟ್ಟ ಗಾಯಗಳನ್ನುಂಟು ಮಾಡಿ ಸಾಕ್ಷ್ಯ ನಾಶ ಮಾಡಿರುತ್ತಾರೆ ಎಂದು ತಿಳಿದು ಬಂದಿರುತ್ತದೆ ಎಂದರೆ ಸರಿಯಲ್ಲ.

ಆ ಬಗ್ಗೆ ದಿ.22-02-2023 ರಂತೆ ತನಿಖಾಧಿಕಾರಿಗೆ "ಈ ದಿನ ----- ನುಡಿದಿರುತ್ತೇನೆ " ಎಂದು ಈಗ ಓದಿ ಹೇಳಿದಂತೆ ನಿಪಿ-49 ರಿಂದ ನಿಪಿ-51 ರಂತೆ ಹೇಳಿಕೆಗಳನ್ನು ನೀಡಿದ್ದೆ ಎಂದರೆ ಸರಿಯಲ್ಲ ಹಾಗೂ ದಿ.26-02-2023 ರಂದು "ದಿ.22-02-2023 ರಂದು ------ ಮರುಹೇಳಿಕೆ ನೀಡಿರುತ್ತೇನೆ " ಎಂದು ಈಗ ಓದಿ ಹೇಳಿದಂತೆ ಮರುಹೇಳಿಕೆ ನಿಪಿ-52 ಎಂದು ಮರುಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಆರೋಪಿ ನನ್ನ ಮೈದುನ ಆಗಿರುವ ಕಾರಣ ಆತನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್ ವಿ ವಕೀಲರಿಂದಃ</u>**

ಇರುವುದಿಲ್ಲ.

| | |
|---|---|
| ಫ್ರಾಸಾ | 22 |
| ಚಾಸಾ | 41 |

**ಮರುವಿಚಾರಣೆ ಇರುವುದಿಲ್ಲ.**

**(ದಿನಾಂಕಃ01.08.2026 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓದಿ ಹೇ ಕೇ ಸರಿ ಇದೆ**

**ಸಹಿ/-**

**(ಕಾಂತರಾಜು.ಎಸ್.ವಿ.)**
**2 ನೇ ಹೆಚ್ಚುವರಿ ಜಿಲ್ಲಾ ಮತ್ತು (ವಿಶೇಷ) ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ (ಕಾರ್ಯಸ್ಥಾನ ಚಿಂತಾಮಣಿ)**